# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ.. ಕನ್ನಡ ವಾರಪತ್ರಿಕೆ


**ಸುಭಾಷಿತ:**
ಒಂಟಿಯಾಗಿರು ತಾಳ್ಮೆಯಿಂದಿರು..
ಯಾರಿಗಾಗಿಯು ಗೋಗರೆಯದಿರು..
ಯಾರ ಹಿಂದೆಯೂ ಜಾರದಿರು..
ನಾವೇ ಬೇಕೆನ್ನುವವರು ಬರಲಿ...
ಬೇಡವೆನ್ನುವವರು ದೂರವೇ ಇರಲಿ..
ಜೀವನದಲ್ಲಿ ಯಾವುದೂ..
ಯಾರೂ ಶಾಶ್ವತವಲ್ಲ..




REGD NO: 1327299/KARKAN26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 17-09-2021 to 23-09-2021 ಬೆಲೆ : 7-00 ಸಂಪುಟ–1 ಸಂಚಿಕೆ–10 ಪುಟಗಳು–6








WE RENT OUR PREMISES FOR AUDITION, PHOTO SHOOT, ACTING CLASS, SCRIPT DISCUSSIONS, FILM RELATED ONLINE DOCUMENTATION & ALLIED WORKS UNDERTAKEN
CONTACT - N.ANANTHAKUMAR
KALAKAR ASSOCIATES - PATTEGARAPALYA, BANGALORE
7019954081


# ಕಲಾವಿದರ, ತಂತ್ರಜ್ಞರ ಬದುಕು ಅತಂತ್ರ: ಕಣ್ಣು ಬಿಡುವುದೇ ಸರಕಾರ?



**ಮಂಗಳೂರು:** ಮಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ನಾಟಕರಂಗ ಹಾಗೂ ಚಿತ್ರರಂಗದ ದಿಗ್ಗಜರು, ಕಲಾವಿದರ ಬದುಕು ಅತಂತ್ರವಾಗುತ್ತಿರುವ ಬಗ್ಗೆ ಗಮನ ಹರಿಸುವಂತೆ ಸರಕಾರವನ್ನು ಆಗ್ರಹಿಸಿದರು. ಮೊದಲಿಗೆ ಮಾತನಾಡಿದ ದೇವದಾಸ್ ಕಾಪಿಕಾಡ್‌ರವರು, ಕರಾವಳಿಯಲ್ಲಿ 30ಕ್ಕೂ ಹೆಚ್ಚು ನಾಟಕ ತಂಡಗಳಿದ್ದು ಸುಮಾರು 7000ಕ್ಕೂ ಹೆಚ್ಚು ಕಲಾವಿದರಿಗೆ ಜೀವನದ ಎಲ್ಲಾ ಬಾಗಿಲುಗಳು ಮುಚ್ಚಿ ನಿರ್ಗತಿಕರಾಗುತ್ತಿದ್ದಾರೆ. ಸರಕಾರದಿಂದ ಯಾವುದೇ ಸ್ಪಂಧನೆ ಬಂದಿಲ್ಲ. ನಮಗೆ ಅವರ ಸ್ಪಂದನೆಯ ಅಗತ್ಯವೂ ಇಲ್ಲ. ನಮ್ಮನ್ನು ಬದುಕಲು ಬಿಡಿ. ನಾಟಕಗಳಿಗೆ ಅವಕಾಶ ಕೊಡಿ ಎಂದು ಸರಕಾರವನ್ನು ಕೇಳಿಕೊಂಡರು. ಕಿಶೋರ್ ಡಿ ಶೆಟ್ಟಿಯವರು ಮಾತಾಡುತ್ತಾ ನಾವು ತುಳು ಸಿನಿಮ ನಾಟಕ, ಯಕ್ಷಗಾನದ ಮೂಲಕ ತುಳು ಭಾಷೆಯನ್ನು ಬೆಳೆಸುತ್ತಿದ್ದೇವೆ. ಈಗ ಕಲಾವಿದರು ಸಂಕಷ್ಟದಲ್ಲಿದ್ದಾರೆ. ಈ ಕಲಾವಿದರು ಸ್ವಾಬಿಮಾನದಿಂದ ದುಡಿದು ತಿನ್ನಲು ಅವಕಾಶ ಕೊಡಿ ಎಂದರು. ಪ್ರಕಾಶ್ ಪಾಂಡೇಶ್ವರರವರು ಮಾತನಾಡುತ್ತಾ ಚಿತ್ರಮಂದಿರಗಳಲ್ಲಿ ಪ್ರತಿಶತ ನೂರರ **3ನೇ ಪುಟಕ್ಕೆ**

# ಬಿಜೆಪಿಯವರಿಗೆ ಹಿಂದೂ ಧರ್ಮದ ಬಗ್ಗೆ ಗೌರವವಿಲ್ಲ

## –ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಟುರು



**ಬೆಂಗಳೂರು:** ಸರ್ಕಾರದ ಗಮನಕ್ಕೆ ತರದೇ ಮುಖ್ಯಕಾರ್ಯದರ್ಶಿಗಳು ದೇವಸ್ಥಾನ ತೆರವುಗೊಳಿಸುವ ಕುರಿತು ಪತ್ರ ಬರೆಯಲು ಸಾಧ್ಯವಿಲ್ಲ. 15ನೇ ತಾರೀಖಿನಿಂದ ಜಿಲ್ಲಾಧಿಕಾರಿಗಳು ಹಾಗೂ ತಹಶಿಲ್ದಾರರು ಸುಪ್ರೀಂ ಕೋರ್ಟ್ ನ ತೀರ್ಮಾನದಂತೆ ಸಾರ್ವಜನಿಕ ಸ್ಥಳಗಳಲ್ಲಿ ಇರುವ ಧಾರ್ಮಿಕ ಕಟ್ಟಡಗಳನ್ನು ನೆಲಸಮ ಮಾಡುತ್ತಿದ್ದಾರೆ. ಇದಕ್ಕೆ ಸಾರ್ವಜನಿಕರ ವಿರೋಧ ವ್ಯಕ್ತವಾದ ಮೇಲೆ ತಮ್ಮ ಮಾನ ಉಳಿಸಿಕೊಳ್ಳಲು ಸರ್ಕಾರ ಬಣ್ಣ ಬದಲಾಯಿಸಿದೆ. ಈಗ ಅವರಿಗೆ ಒಡೆಯಬೇಡಿ ಎಂಬ ಸೂಚನೆ ಕೊಡ್ತೀವಿ ಎನ್ನುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಬಾರದೆ ದೇವಾಲಯ ಒಡೆದಿದ್ದಾರ? ಮೈಸೂರು ಸಂಸದರು ಈಗ ದೇವಾಲಯ ಒಡೆದು ಆದಮೇಲೆ **4ನೇ ಪುಟಕ್ಕೆ**

# ಸೆ.17 ರಂದು ಬೃಹತ್ ಲಸಿಕಾ ಮೇಳ..

## ಸದುಪಯೋಗಕ್ಕೆ ಜಿಲ್ಲಾಧಿಕಾರಿ ಡಾ. ರಾಜೇಂದ್ರ.ಕೆ.ವಿ ಮನವಿ.



**ಮಂಗಳೂರು:** ಸರ್ಕಾರದ ಸೂಚನೆಯಂತೆ ಜಿಲ್ಲೆಯಲ್ಲಿ ಇದೇ ಸೆಪ್ಟೆಂಬರ್ 17ರ ಶುಕ್ರವಾರದಂದು ಬೆಳಿಗ್ಗೆ 7 ರಿಂದ ರಾತ್ರಿ 7 ಗಂಟೆಯವರೆಗೆ ಬೃಹತ್ ಲಸಿಕಾಕರಣ ಅಭಿಯಾನವನ್ನು ಆಯೋಜಿಸಲಾಗಿದ್ದು, ಸುಮಾರು 533 ಕೇಂದ್ರಗಳಲ್ಲಿ ಲಸಿಕೆಯನ್ನು ನೀಡಲು ಕ್ರಮಕೈಗೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ.ಕೆ.ವಿ ಹೇಳಿದರು. ಅವರು ಸೆಪ್ಟೆಂಬರ್ 15ರ ಬುಧವಾರದಂದು ಕೋವಿಡ್ ಲಸಿಕಾ ಮೇಳವನ್ನು ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಸಲು ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳವುದರ ಕುರಿತು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ಅಧ್ಯಕ್ಷರು, ಪಿಡಿಒ, ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಗ್ರಾಮಲೆಕ್ಕಿಗರ ಜೊತೆ ನಡೆದ ವಿಡಿಯೋ ಸಂವಾದದಲ್ಲಿ ಮಾತನಾಡಿದರು. ನಗರ ಹಾಗೂ ಗ್ರಾಮೀಣ ಭಾಗದ ಪ್ರತಿ ಮನೆಗಳಿಗೂ ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬಿಲ್ ಕಲೆಕ್ಟರ್ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಭೇಟಿ ನೀಡಿ ಇಲ್ಲಿಯವರೆಗೂ ಲಸಿಕೆ ಪಡೆಯದಿರುವ 18 ವರ್ಷ ಮೇಲ್ಪಟ್ಟವರನ್ನು ಗುರುತಿಸಿ ಪಟ್ಟಿಯನ್ನು ಸಿದ್ದಪಡಿಸಿಕೊಳ್ಳುವಂತೆ ಸೂಚಿಸಿದರಲ್ಲದೇ, ಅವರಿಗೆ ಲಸಿಕೆ ಪಡೆಯಲು ಸ್ಥಳ ಹಾಗೂ ದಿನಾಂಕ ಇರುವ ಸ್ಲಿಪ್ (ಚೀಟಿ) ಯನ್ನು ವಿತರಿಸಿ ಲಸಿಕೆ ತೆಗೆದುಕೊಳ್ಳುವಂತೆ ತಿಳಿಸಬೇಕು ಎಂದರು. ವಿಶೇಷಚೇತನರು ಮತ್ತು ಅಶಕ್ತರನ್ನು ಗುರುತಿಸಿ ಅವರು ಇರುವ ಸ್ಥಳಕ್ಕೆ ಹೋಗಿ ಲಸಿಕೆ ನೀಡಬಹುದು ಅಥವಾ ಅವರನ್ನು ವಾಹನದ ಮೂಲಕ ಲಸಿಕಾ ಕೇಂದ್ರಕ್ಕೆ ಕರೆತಂದು ಲಸಿಕೆ ನೀಡಬಹುದು ಎಂದರು. ಲಸಿಕೆ ನೀಡಲು ಸರ್ಕಾರಿ ಶಾಲೆಗಳು, ಸಮುದಾಯ ಭವನ, ಅಂಗನವಾಡಿ ಕೇಂದ್ರಗಳು ಹಾಗೂ ಇತರೆ ಸರಕಾರಿ ಕಟ್ಟಡಗಳನ್ನು ಲಸಿಕಾ ಕೇಂದ್ರಗಳನ್ನಾಗಿ



ಬಳಸಿಕೊಂಡು ಲಸಿಕೆ ನೀಡಬೇಕು ಎಂದರು. ಬೃಹತ್ ವ್ಯಾಕ್ಸಿನ್ ಮೇಳವು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಈ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದರು. ಮೆಗಾ ವ್ಯಾಕ್ಸಿನ್ ಮೇಳದಲ್ಲಿ 1,50,000 ಕೋವಿಡ್ ಲಸಿಕೆ ನೀಡುವ ಗುರಿಯನ್ನು **3ನೇ ಪುಟಕ್ಕೆ**






# ಕಲಾ ತರಂಗಿಣಿ

## ಸಿನಿಲೋಕದ ಧ್ರುವತಾರೆ- ಬಾಲಣ್ಣ



ಕನ್ನಡ ಚಿತ್ರರಂಗದಲ್ಲಿ ಹೆಮ್ಮರವಾಗಿ ಬೆಳೆದು ನಿಂತ ಅಪ್ರತಿಮ ನಟ ಟಿ ಎನ್ ಬಾಲಕೃಷ್ಣ ಬಾಲಣ್ಣನೆಂದೆ ಹೆಸರುವಾಸಿಯಾದವರು. ಒಂದೇ ನಮೂನೆಯ ಪಾತ್ರಗಳಿಗೆ ಜೋತುಬೀಳದೆ ಬೇರೆ ಬೇರೆ ಚಿತ್ರಗಳಲ್ಲಿ ಬೇರೆ ಬೇರೆ ಪಾತ್ರಗಳನ್ನು ಮಾಡುತ್ತ ಕಲಾ ರಸಿಕರ ಮನಸ್ಸನ್ನು ಗೆದ್ದವರು. ಸುಮಾರು ಐನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಬಾಲಣ್ಣ ಡಾ. ರಾಜ್ ಕುಮಾರ್ ಜೊತೆ ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಬಾಲಣ್ಣನಿಗೆ ಶ್ರವಣ ಸಮಸ್ಯೆ ಇದ್ದರೂ, ತನ್ನ ಜೊತೆ ಅಭಿನಯಿಸುತ್ತಿದ್ದ ಕಲಾವಿದರು ಮಾತಾನಾಡುವಾಗ ಅವರ ತುಟಿ ಚಲನೆಯನ್ನು ಗಮನಿಸಿ ಸಂಭಾಷಣೆ ಹೇಳುತ್ತಾ ಶ್ರವಣ ಸಮಸ್ಯೆ ಇದೆ ಎಂಬುದು ಗೊತ್ತಾಗದ ರೀತಿಯಲ್ಲಿ ಅಭಿನಯಿಸುತ್ತಿದ್ದ ಚಾಣಾಕ್ಷರು ಬಾಲಣ್ಣ. 1916 ರ ನವೆಂಬರ್ ಎರಡರಂದು ಅರಸೀಕೆರೆಯಲ್ಲಿ ಒಂದು ಬಡಾ ಕುಟುಂಬದಲ್ಲಿ ಜನಿಸಿದ ಬಾಲಣ್ಣ ಬಾಲ್ಯದಲ್ಲಿ ತುಂಬಾ ಸಂಕಷ್ಟಗಳನ್ನು ಎದುರಿಸಬೇಕಾಯಿತು.



ರಂಗಭೂಮಿಯಲ್ಲಿ ನಟನೆ ಮಾಡುವ ಮುಂಚೆ ನಾಟಕ ಕಂಪನಿಯೊಂದರ ರಂಗ ವೇದಿಕೆಯ ಚಿತ್ರಗಾರನಾಗಿ ಕಾರ್ಯನಿರ್ವಹಿಸಿದರು. ನಂತರ ಗೇಟ್ ಕೀಪರಾದರು. ಬಾಲಣ್ಣನವರು ಪ್ರಾರಂಭದಲ್ಲಿ ಅಂದರೆ 1929 ರಲ್ಲಿ "ಶ್ರೀ ರಾಮ ಪಟ್ಟಾಭಿಷೇಕ" ನಾಟಕದಲ್ಲಿ ಅಭಿನಯಿಸಿದರು. ನಂತರದ ದಿನಗಳಲ್ಲಿ ಬೇರೆ ನಾಟಕ ಕಂಪನಿಗಳಲ್ಲಿ ಅಭಿನಯಿಸುತ್ತಿದ್ದ ಬಾಲಣ್ಣ ಹೆಸರಾಂತ ಕಂಪನಿಯಾದ ಗುಬ್ಬಿ ವೀರಣ್ಣನವರ ನಾಟಕ ಕಂಪನಿ ಸೇರಿದರು. ಬಾಲಣ್ಣನವರು ಗುಬ್ಬಿ ವೀರಣ್ಣನವರ ನಾಟಕಗಳಲ್ಲಿ ಅಭಿನಯಿಸುತ್ತಿದ್ದ ಸಂದರ್ಭದಲ್ಲಿ ಚಲನಚಿತ್ರ ನಿರ್ದೇಶಕ ಬಿ ಅರ್ ಪಂತುಲು, ನಾಟಕಗಳಲ್ಲಿನ ಬಾಲಣ್ಣನ ಅಭಿನಯ ನೋಡಿ ಅವರಿಗೆ ಚಲನಚಿತ್ರಗಳಲ್ಲಿ ಅವಕಾಶ ನೀಡಿದರು. ಅಲ್ಲಿಂದ ಚಲನಚಿತ್ರ ನಟರಾಗಿ ವೃತ್ತಿ ಜೀವನ ಆರಂಭಿಸಿದ ಬಾಲಣ್ಣ ಹಾಸ್ಯ, ಖಳನಾಯಕ, ತಂದೆ, ಮಾವ ಹೀಗೆ ಅತೀ ಹೆಚ್ಚು ವಿಧಗಳ ಪಾತ್ರವನ್ನು ಮಾಡಿ ಕಲೆಯ ಕೇಂದ್ರ ಬಿಂದುವಾದರು. "ಮುರಿಯದ ಮನೆ" "ಬಂಗಾರದ ಮನುಷ್ಯ" "ಗಂಧದ ಗುಡಿ" " ಕಾಮನ ಬಿಲ್ಲು" ಮುಂತಾದ ಅದೆಷ್ಟೊ ಮಹೋನ್ನತ ಚಿತ್ರಗಳಲ್ಲಿ ಅಭಿನಯಿಸಿದರು. ಅಗಿನ ಕಾಲದಲ್ಲಿ ಕನ್ನಡ ಚಿತ್ರಗಳ ಎಲ್ಲಾ ಕೆಲಸ ಕಾರ್ಯಗಳನ್ನು ಚೆನ್ನೈ ನಲ್ಲಿ ಮಾಡಬೇಕಾದ ಅನಿವಾರ್ಯತೆ ಇದ್ದು, ಅದರಿಂದ ತೊಂದರೆಗೆ ಈಡಾಗುತ್ತಿದ್ದ ನಿರ್ಮಾಪಕರನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನ ಕೆಂಗೇರಿ ಸಮೀಪದಲ್ಲಿ 20 ಎಕ್ರೆ ಜಾಗದಲ್ಲಿ "ಅಭಿಮಾನ್ ಸ್ಟುಡಿಯೋ" ಸ್ಥಾಪಿಸಿದರು. ಅದರೆ ಅವರಿಗೆ ಸರಿಯಾದ ರೀತಿಯಲ್ಲಿ ಸಹಕಾರ ಸಿಗದೆ ಇದ್ದುದರಿಂದ ಇನ್ನಷ್ಟು ತೊಂದರೆಗಳನ್ನು



ಬಾಲಣ್ಣ ಎದುರಿಸಬೇಕಾಯಿತು. ಬಾಲಣ್ಣವವರು ಅಷ್ಟು ಕಷ್ಟ ಪಟ್ಟು ಮಾಡಿದ ಸ್ಟುಡಿಯೋ ಬಾಲಣ್ಣನವರ ಮಕ್ಕಳು, ಮೊಮ್ಮಕ್ಕಳು ನೋಡಿಕೊಂಡಿದ್ದರೂ, ಹೆಚ್ಚಿನ ಧಾರಾವಾಹಿಗಳು, ಸಿನಿಮಾಗಳು ಅಲ್ಲಿ ಚಿತ್ರೀಕರಣ ನಡೆದಿದ್ದರೂ ಇಂದು ದಿಕ್ಕಿಲ್ಲದಂತಾಗಿದೆ. 1995 ರಲ್ಲಿ ಜುಲೈ 18 ರಂದು ಅನಾರೋಗ್ಯದಿಂದ ಕೊನೆಯುಸಿರೆಳೆದ ಬಾಲಣ್ಣ ಮತ್ತಷ್ಟು ದಿನಗಳು ಬದುಕಿ ಉಳಿಯುತ್ತಿದ್ದರೆ ಅವರ ಕನಸಿನ ಕೂಸಾಗಿದ್ದ ಸ್ಟುಡಿಯೋ ಕನ್ನಡ ಚಿತ್ರರಂಗಕ್ಕೊಂದು ಸಿನಿಮಾ ತಯಾರಿಸುವ ಮನೆಯಾಗುತ್ತಿತ್ತು. ಅವರ ನಿಧನದಿಂದ ಸ್ಟುಡಿಯೋಗೆ ಕತ್ತಲೆ ತುಂಬಿ ಹೋಯಿತು. ಏನೇ ಆದರೂ ಬಾಲಣ್ಣ ಪಟ್ಟ ಶ್ರಮ ಮತ್ತು ಅವರ ಅಭಿನಯದಿಂದ ಕಲಾಪ್ರೇಮಿಗಳ ಹೃದಯದಲ್ಲಿ ಟಿ ಎನ್ ಬಾಲಕೃಷ್ಣ ಧ್ರುವ ತಾರೆಯಾಗಿ ನೆಲೆಸಿದ್ದಾರೆ.



ಎನ್ನಾರ್ ಕೆ ವಿಶ್ವನಾಥ್
ENNAR K VISHWANATH

## ಉಪೇಂದ್ರರಿಂದ "ರಾಣ" ಟೀಸರ್!

ರಿಯಲ್ ಸ್ಟಾರ್ ಉಪೇಂದ್ರ ಅವರು ಶ್ರೇಯಸ್ಸ್ ಕೆ ಮಂಜು ಅಭಿನಯದ "ರಾಣ" ಚಿತ್ರದ ಟೀಸರ್ ಹಾಗೂ ಪೋಸ್ಟರ್ ಬಿಡುಗಡೆ ಮಾಡುತ್ತಾ, ಶ್ರೇಯಸ್ಸ್ ಹೆಸರಿನಲ್ಲೇ ಶ್ರೇಯಸ್ಸು ಇದೆ. ತಂದೆಯನ್ನು ಮೀರಿಸಿದ ಮಗ ಶ್ರೇಯಸ್ಸ್. ಅವನಿಗೆ ಹಾಗೂ ಚಿತ್ರತಂಡಕ್ಕೆ ಒಳ್ಳೆಯದಾಗಲಿ ಎಂದು ಉಪೇಂದ್ರ ಹರಸಿದರು. ಕಂಪ್ಲಿ ಶಾಸಕರಾದ ಎ.ಓ ಗಣೇಶ್ ಅವರು ಸಮಾರಂಭಕ್ಕೆ ಆಗಮಿಸಿ ಶುಭ ಕೋರಿದರು. ಚಿತ್ರೀಕರಣ ಬಹುತೇಕ ಮುಗಿದಿದೆ. ಕೋವಿಡ್ ನಿಯಮಾವಳಿಗಳು ಜಾರಿಯಿರುವುದರಿಂದ ಕೆಲವು ಜಾಗಗಳಲ್ಲಿ ಚಿತ್ರೀಕರಣ ನಡೆಸಲು ಅನುಮತಿ ಸಿಕ್ಕಿದ್ದು ತಡವಾಯಿತು. ಇಲ್ಲದಿದ್ದರೆ, ನಮ್ಮ ಚಿತ್ರ ಈ ವೇಳೆಗೆ ಸಿದ್ದವಿರುತ್ತಿತ್ತು. ಎಂದರು ನಿರ್ದೇಶಕ ನಂದಕಿಶೋರ್. ಚಿತ್ರದ ಹಾಡುಗಳು ಚೆನ್ನಾಗಿದೆ. ಹಾಡುಗಳ ವಿಡಿಯೋ ಯಾವಾಗ ಬರುವುದೋ ಎಂದು ಕಾತುರದಿಂದ ಕಾಯುತ್ತಿದ್ದೇನೆ. ಚಿತ್ರತಂಡಕ್ಕೆ ಹಾಗೂ ಆಡಿಯೋ ಹಕ್ಕು ಪಡೆದಿರುವ ಆನಂದ್ ಆಡಿಯೋ ಸಂಸ್ಥೆಗೆ ಧನ್ಯವಾದ ತಿಳಿಸಿದರು ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ. ನಾನು ಚಿಕ್ಕ ವಯಸ್ಸಿನಿಂದಲೂ ಉಪೇಂದ್ರ ಅವರ ಹುಚ್ಚು ಅಭಿಮಾನಿ. ನಾನು ಅವರಿಂದ ಕಲತಿರುವುದು ಸಾಕಷ್ಟು. ಚಿತ್ರರಂಗಕ್ಕೆ ಹೊಸದಾಗಿ ಬರುತ್ತಿರುವ ನೂತನ ಪ್ರತಿಭೆಗಳಿಗೆ ಅವರು ನೀಡುವ ಪ್ರೋತ್ಸಾಹಕ್ಕೆ ಚಿರಋಣಿ. ಶಿವರಾಜಕುಮಾರ್ ಅವರು ಸಹ ನನಗೆ ಈ ಚಿತ್ರದಲ್ಲಿ ಲಾಂಗ್ ಹಿಡಿಯುವುದನ್ನು ಹೇಳಿಕೊಟ್ಟಿದ್ದಾರೆ. ನಾನು ಏನಾದರೂ ಉತ್ತಮವಾಗಿ ನಟಿಸಿದ್ದೇನೆಂದರೆ ಅದಕ್ಕೆ ಕಾರಣ ನಿರ್ದೇಶಕ ನಂದಕಿಶೋರ್ ಹಾಗೂ ಛಾಯಾಗ್ರಹಕ ಶೇಖರ್ ಚಂದ್ರ. ಎಂದು ಚಿತ್ರತಂಡಕ್ಕೆ ಧನ್ಯವಾದ ತಿಳಿಸಿದರು. ನಾನು ಚಿತ್ರ ನಿರ್ಮಾಣ ಮಾಡಲು ಪ್ರಮುಖ ಕಾರಣ ಕೆ.ಮಂಜು. ಚಿತ್ರ ಉತ್ತಮವಾಗಿ ಮೂಡಿ ಬರಲು ಇಡೀ ತಂಡ ಸಾಕಷ್ಟು ಶ್ರಮಿಸುತ್ತಿದೆ. ನಿಮ್ಮೆಲ್ಲರ ಹಾರೈಕೆ ನಮಗಿರಲಿ ಎಂದರು ನಿರ್ಮಾಪಕ ಗುಜ್ಜಲ್ ಪುರುಷೋತ್ತಮ್. ಈ ಚಿತ್ರದಲ್ಲಿ ಶ್ರೇಯಸ್ಸ್‌ಗೆ ನಾಯಕಿಯರಾಗಿ ರೀಷ್ಮಾ ನಾಣಯ್ಯ ಹಾಗೂ ರಜನಿ ಭಾರದ್ವಾಜ್ ನಟಿಸುತ್ತಿದ್ದಾರೆ. ಕೆ ಮಂಜು ಅರ್ಪಿಸುವ ಈ ಚಿತ್ರಕ್ಕೆ ಕೆ. ಎಂ. ಪ್ರಕಾಶ್ ಸಂಕಲನವಿದೆ. ವಿಶ್ವ ಕಲಾ ನಿರ್ದೇಶನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನವಿರುವ "ರಾಣ" ಚಿತ್ರಕ್ಕೆ ಪ್ರಶಾಂತ್ ರಾಜಪ್ಪ ಸಂಭಾಳಣೆ ಬರೆದಿದ್ದಾರೆ.



## ನವಿರಾದ ಪ್ರೀತಿಯ "ಮೊದಲ ಮಿಡಿತ"

ಮೊದಲ ಮಿಡಿತ ಸಿನಿಮಾ ಒಂದು ಕೌಟುಂಬಿಕ ಚಿತ್ರವಾಗಿದ್ದು ಒಂದು ನವಿರಾದ ಪ್ರೀತಿಯ ಕಥಾಹಂದರದೊಂದಿಗೆ ಚಿತ್ರವನ್ನು ಮಾಡಲಾಗಿದೆ. ಈ ಚಿತ್ರವನ್ನು ಕನ್ನಡ ಚಿತ್ರರಂಗದಲ್ಲಿ ಸುಮಾರು 12ವರ್ಷಗಳಿಂದ ಹಲವು ವಿಭಾಗಗಳಲ್ಲಿ ಕೆಲಸ ಮಾಡಿಕೊಂಡು ಬಂದಿರುವ ಹರಿಚೇತ್ ನಿರ್ದೇಶನ ಮಾಡಿ ನಿರ್ಮಾಣ ಕೂಡ ಮಾಡಿದ್ದಾರೆ ನಿರ್ಮಾಣದಲ್ಲಿ ಮತ್ತಿಬ್ಬರು ಕೃಷ್ಣಪ್ಪ ಜಿಹೆಚ್ ಹಾಗೂ ವಿಶ್ವನಾಥ್ ಜಿ ಜೊತೆಗೂಡಿದ್ದಾರೆ. ಈ ಚಿತ್ರದಲ್ಲಿ ದೊಡ್ಡ ಅನುಭವಿ ಕಲಾವಿದರು ತಂತ್ರಜ್ಞರ ದಂಡೇ ಇದೆ ನಾಯಕನಾಗಿ ನಿಮಿಷ್ ನಾಯಕಿಯಾಗಿ ರಶ್ಮಿತಾ ರೋಜಾ ನಟಿಸಿದ್ದರೆ ಮುಖ್ಯ ಭೂಮಿಕೆಯಲ್ಲಿ ಟಿ ಎಸ್ ನಾಗಾಭರಣ, ನೀರನಹಳ್ಳಿ ರಾಮಕೃಷ್ಣ, ತಬಲನಾಣಿ, ಸಂಗೀತ, ಅರವಿಂದ ರಾವ್, ಕಿಲ್ಲರ್ ವೆಂಕಟೇಶ್, ಶಂಕರ್ ಭಟ್, ಹಾಸ್ಯ ನಟರಾದ ಕೆಂಪೇಗೌಡ, ಹರೀಶ್ ಹೀಗೆ ಸುಮಾರು 25ಕ್ಕೂ ಅಧಿಕ ಹಿರಿಯ ಕಲಾವಿದರು ಅಭಿನಯಿಸಿದ್ದಾರೆ ಇನ್ನು ತಂತ್ರಜ್ಞರಾಗಿ ಛಾಯಾಗ್ರಹಣವನ್ನು ಸುಂದರನಾಥ್ ಸುವರ್ಣ ಗರಡಿಯಲ್ಲಿ ಪಳಗಿದ ರಮೇಶ್ ನಿಭಾಯಿಸಿದ್ದು ಈ ಚಿತ್ರದಲ್ಲಿ ಒಟ್ಟು 5ಸಾಹಸ ಸನ್ನಿವೇಶಗಳಿದ್ದು ಸಾಹಸ ನಿರ್ದೇಶಕರಾಗಿ ಖ್ಯಾತ ಸಾಹಸ ನಿರ್ದೇಶಕರಾದ ಡಿಫರೆಂಟ್ ಡ್ಯಾನಿ ,ಅಲ್ಟಿಮೇಟ್ ಶಿವು, ಜಾಗ್ವಾರ್ ಸಣ್ಣಪ್ಪ ಮಾಡಿದ್ದು ಕಲಾ ನಿರ್ದೇಶನವನ್ನು ಮುಂಗಾರುಮಳೆ ಖ್ಯಾತಿ ಕಲಾ ನಿರ್ದೇಶಕರಾದ ಕನಕರಾಜ್ ನಿರ್ವಹಣೆ ಮಾಡಿದ್ದಾರೆ ನೃತ್ಯ ನಿರ್ದೇಶನವನ್ನು ಸ್ಟಾರ್ ನಾಗಿ ಮಾಡಿದ್ದು ಒಟ್ಟಾಗಿ ಮೊದಲ ಮಿಡಿತ ಸಿನಿಮಾ ಉತ್ತಮವಾಗಿ ಮೂಡಿಬಂದಿದೆ.

## ಕರುನಾಡ ಯಜಮಾನನ ಪಠ್ಯ!

ಡಾ. ವಿಷ್ಣುವರ್ಧನ್ ಅವರ 71ನೇ ಜನ್ಮದಿನದ ಅಂಗವಾಗಿ ಡಾ. ವಿಷ್ಣುಸೇನಾ ಸಮಿತಿಯು ಕರುನಾಡ ಯಜಮಾನ ಡಾ. ವಿಷ್ಣುವರ್ಧನ್' ಎಂಬ ಕಿರುಹೊತ್ತಿಗೆಯನ್ನು ಶಾಲಾ ಮಕ್ಕಳಿಗೆ ಉಚಿತವಾಗಿ ವಿತರಿಸುವ ದೃಷ್ಟಿಯಿಂದ ಹೊರತಂದಿದೆ. ಸದರಿ ಕೃತಿಯನ್ನು ಕನಿಷ್ಠ ಒಂದು ಲಕ್ಷ ಮಕ್ಕಳಿಗೆ ವಿತರಿಸುವ ಗುರಿಯನ್ನು ಹೊಂದಿದೆ. ಡಾ. ಶರಣು ಹುಲ್ಲೂರ್ ಅವರು ಬರೆದ ಕರುನಾಡ ಯಜಮಾನ ಡಾ. ವಿಷ್ಣುವರ್ಧನ್ ಕುರಿತಾದ ಪುಸ್ತಕ ಶಿಕ್ಷಣ ಸಚಿವರಾದ ಬಿ. ಸಿ. ನಾಗೇಶ್ ತಮ್ಮ ಕಛೇರಿಯಲ್ಲಿ ಬಿಡುಗಡೆಗೊಳಿಸಿದರು. ಸಿನಿಮಾ, ಜನಪರ ಕಾರ್ಯಗಳ ಮೂಲಕ ಡಾ. ವಿಷ್ಣುವರ್ಧನ್ ಅವರು ಯಾವತ್ತಿಗೂ ನಮ್ಮೊಂದಿಗೆ ಇರುತ್ತಾರೆ. ಅವರ ಆದರ್ಶ ಬದುಕು, ನಾಡು, ನುಡಿಯ ಬಗೆಗಿನ ಅಭಿಮಾನ ಮತ್ತು ಜೀವಪರ ಕಾಳಜಿ ನಮಗೆಲ್ಲ ಮಾದರಿಯಾಗಿದೆ. ಅವರು ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನು ಎದುರಿಸಿದರೂ, ಕೊನೆಗೂ ಗೆದ್ದದ್ದು ಅವರ ಶ್ರಮ. ಹಾಗಾಗಿ ಮಕ್ಕಳಿಗೆ ಡಾ. ವಿಷ್ಣು ಬದುಕಿನ ಕುರಿತು ಪರಿಚಯ ಆಗಬೇಕಿದೆ. ಆ ಕಾರಣದಿಂದ ಡಾ. ವಿಷ್ಣು ಅವರ ಸಾಧನೆಗಳನ್ನು ಪಠ್ಯದಲ್ಲಿ ಸೇರಿಸಲು ಡಾ. ವಿಷ್ಣು ಸೇನಾ ಸಮಿತಿ ಮನವಿ ಮಾಡಿತು. ಇದಕ್ಕೆ ಸ್ಪಂದಿಸಿದ ಸಚಿವರು "ಪಠ್ಯಪುಸ್ತಕ ಸಮಿತಿ" ಗೆ ನಿಮ್ಮ ಮನವಿಯನ್ನು ಶಿಫಾರಸ್ಸುಗೊಳಿಸುವುದಾಗಿ ತಿಳಿಸಿದರು. ಲೇಖಕರಾದ ಡಾ. ಶರಣು ಹುಲ್ಲೂರು, ವಿಷ್ಣು ಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ, ಎಬಿವಿಪಿ ಮುಖಂಡ ರಾದ ಗುರುನಾಥ ರಾಜಗೀರ ಹಾಜರಿದ್ದರು.

## ವಿಶೇಷತೆಗಳ ಗುಚ್ಛ 'ತ್ರಿವೇದಂ'

ಜೈ ಸಿಂಹ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣಗೊಳ್ಳುತ್ತಿರುವ 'ತ್ರಿವೇದಂ' ಚಿತ್ರದಲ್ಲಿ 2012 ರಲ್ಲಿ ಬೆಂಗಳೂರಿನ ಕುರುಬರಹಳ್ಳಿ, ಆರು ವರ್ಷದ ಕೆಳಗೆ ಮಂಡ್ಯಾ ಮತ್ತು ಹನ್ನರೆಡು ವರ್ಷದ ಹಿಂದೆ ಮೈಸೂರು ಆಸುಪಾಸುದಲ್ಲಿ ಜರುಗಿರುವ ನೈಜ ಕಥೆಯನ್ನು ಅಂದರೆ ತ್ರಿವಳಿ ಕತೆಗಳನ್ನು ಒಗ್ಗೂಡಿಸಿ ಒಂದು ಸಿನಿಮಾ ಮಾಡಲು ಹೊರಟಿದ್ದಾರೆ. ಆದರೆ ಒಂದಕ್ಕೊಂದು ಸಂಬಂದವಿರುವುದಿಲ್ಲ. ಎಲ್ಲವು ಪ್ರೀತಿ ಕುರಿತಾಗಿರುವ ಕಥೆಗೆ ಪೂರಕವಾಗುವಂತೆ ಶೀರ್ಷಿಕೆಯನ್ನು ಇಡಲಾಗಿದೆ. ಸೋಮವಾರ ದಂದು ಕಂಠೀರವ ಸ್ಟುಡಿಯೋದಲ್ಲಿ ಸರಳವಾಗಿ ಮಹೂರ್ತ ನಡೆಯಿತು. ಮೊದಲ ದೃಶ್ಯಕ್ಕೆ ಹಿರಿಯ ಸಾಹಿತಿ ಡಾ. ವಿ. ನಾಗೇಂದ್ರಪ್ರಸಾದ್ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಇಪ್ಪತ್ತು ವರ್ಷಗಳ ಕಾಲ ಚಿತ್ರರಂಗದಲ್ಲಿ ಅನುಭವ ಪಡೆದುಕೊಂಡಿರುವ ಅರುಣ್‌ಜಯರಾಂ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಬೆಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮಿ ಆರ್. ಕೆ. ಭವಾನಿ ಹೇಮಂತ್ ನಿರ್ಮಾಪಕರಾಗಿದ್ದಾರೆ. ಮೂವರು ನಾಯಕರು ಆಯ್ಕೆಯಾಗಿದ್ದು, ಮೂವರು ನಾಯಕಿಯರ ಶೋಧ ನಡೆಯುತ್ತಿದೆ. ಮೊದಲನೆಯದಲ್ಲಿ ಪ್ರತಾಪ್ ನಾರಾಯಣ್ ಕೊರಿಯರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಕೊರಿಯರ್‌ದಲ್ಲಿ ಕೆಲಸ ಮಾಡುವ ಹುಡುಗರನ್ನು ಭೇಟಿ ಮಾಡಿ ಅವರುಗಳಿಂದ ಒಂದಷ್ಟು ಸಲಹೆಗಳನ್ನು ಪಡೆದು ಕೊಂಡಿದ್ದಾರೆ. ಜೀವನದಲ್ಲಿ ಯಾವ ರೀತಿ ಪ್ರೀತಿಗೋಸ್ಕರ ಹೋರಾಡುತ್ತಾನೆ. ಇವರಿಗೆ ಅಂತಲೇ ಮೂರು ಫೈಟ್ಸ್‌ಗಳು ಎರಡು ಹಾಡುಗಳನ್ನು ಸೃಷ್ಟಿಸಲಾಗಿದೆ. ಎರಡನೆಯದಲ್ಲಿ ಅಚ್ಯುತಕುಮಾರ್. ಕೊನೆಯದರಲ್ಲಿ ರಂಗಭೂಮಿ ಹಿನ್ನಲೆ ಇರುವ ಶಶಿ. ನಾಯಕನ ಗೆಳೆಯನಾಗಿ ಧರ್ಮಣ್ಣ ಕಡೂರು ಇವರಿಗೆ ಕಾಂಬಿನೇಷನ್ ಓಂಪ್ರಕಾಶ್‌ರಾವ್ ಇರುತ್ತಾರೆ. ಉಳಿದಂತೆ ಕುರಿಪ್ರತಾಪ್, ಮಳವಳ್ಳಿ ಸಾಯಿಕೃಷ್ಣ, ಗೋಪಾಲ್ ದೇಶಪಾಂಡೆ ಮುಂತಾದವರ ತಾರಾಬಳಗವಿದೆ. ನಾದಬ್ರಹ್ಮ ಹಂಸಲೇಖಾರ ಶಿಷ್ಯಾ ರಘುಧನ್ವಂತ್ರಿ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜಸಿದ್ದಾರೆ. ಛಾಯಾಗ್ರಹಣ ಕಿರಣ್ ಹಂಪ್ಲಾಪುರ, ಸಂಕಲನ ವೆಂಕಿ.ಯು.ಡಿ.ವಿ, ಸಾಹಸ ಮಾಸ್‌ಮಾದ, ಸಾಹಿತ್ಯ ಡಾ ವಿ ನಾಗೇಂದ್ರಪ್ರಸಾದ್–ಅರಸು ಅಂತಾರೆ–ಗೌಸ್‌ಪೀರ್, ನೃತ್ಯ ಹೈಟ್‌ಮಂಜು ಅವರದ್ದಾಗಿದೆ.





## "ಚಡ್ಡಿದೋಸ್ತ್ ಕಡ್ಡಿ ಅಲ್ಲಾಡುಸ್ಬುಟ್ಟ"

ಸೆವೆನ್ ರಾಜ್ ಪ್ರೊಡಕ್ಷನ್ ಅಡಿಯಲ್ಲಿ ರೆಡ್ ಅಂಡ್ ವೈಟ್ ಖ್ಯಾತಿಯ ಸೆವೆನ್ ರಾಜ್ ಅವರ ನಿರ್ಮಾಣದ "ಚಡ್ಡಿದೋಸ್ತ್ ಕಡ್ಡಿ ಅಲ್ಲಾಡುಸ್ಬುಟ್ಟ" ಹಾಸ್ಯದ ಜೊತೆ ಸ್ನೇಹ, ಪ್ರೀತಿಯ ಕಥಾನಕ ಹೊಂದಿದ ಚಿತ್ರ. ಇದೇ 17ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿರುವ ಈ ಚಿತ್ರಕ್ಕೆ ಆಸ್ಕರ್ ಕೃಷ್ಣ ನಿರ್ದೇಶನದೊಂದಿಗೆ ನಾಯಕನಾಗೂ ನಟಿಸಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ ರಚಿಸಿರುವ ಲೋಕೇಂದ್ರ ಸೂರ್ಯ ಮತ್ತೊಬ್ಬ ನಾಯಕನಾಗಿದ್ದು, ಗೌರಿ ನಾಯರ್ ನಾಯಕಿಯಾಗಿ ನಟಿಸಿದ್ದಾರೆ. ನಿರ್ಮಾಪಕ ಸೆವೆನ್‌ರಾಜ್ ಚಿತ್ರದಲ್ಲಿ ಖಳನಾಯನಾಗಿ ಕಾಣಿಸಿಕೊಂಡಿದ್ದಾರೆ. ಕಾಮಿಡಿ ಜೊತೆಗೆ ಕ್ರೈಮ್, ಥ್ರಿಲ್ಲರ್ ಕಥಾನಕ ಹೊಂದಿರುವ ಈ ಚಿತ್ರದಲ್ಲಿ ಸ್ನೇಹ ಸಂಬಂಧ, ಪ್ರೀತಿ, ಪ್ರೇಮ, ರಾಜಕೀಯ. ಕ್ರೈಮ್ ಮತ್ತು ಈಗಿನ ಪೊಲೀಸ್ ವ್ಯವಸ್ಥೆಯಂಥ ಹಲವಾರು ಅಂಶಗಳು ಹೇಗೆ ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ ಎಂಬುದನ್ನು ಹೇಳಲಾಗಿದೆ. ಅನಂತ್ ಆರ್ಯನ್ ಅವರ ಸಂಗೀತ, ಗಗನ್ ಅವರ ಕ್ಯಾಮೆರಾ ವರ್ಕ್ ಚಿತ್ರಕ್ಕಿದ್ದು, ಬೆಂಗಳೂರು, ತುಮಕೂರು, ಕುಣಿಗಲ್ ಸುತ್ತಮುತ್ತ ಶೂಟಿಂಗ್ ನಡೆಸಲಾಗಿದೆ.

## "ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ"



"ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ" ಕನ್ನಡ ಚಿತ್ರವು ಸ್ಪೇನ್ ದೇಶದ ಮ್ಯಾಡ್ರಿಡ್ ನಗರದಲ್ಲಿ ನಡೆಯುವ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲೂ ಪ್ರಶಸ್ತಿಗೆ ಭಾಜನವಾಗಿದೆ. ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ ಉಡುಪಿಯ ಬಾಲನಟ ದೃಶಾ ಕೊಡಗು ಅವರಿಗೆ ಶ್ರೇಷ್ಠ ಬಾಲನಟ ಪ್ರಶಸ್ತಿ ದೊರಕಿದೆ. ಈ ಚಿತ್ರಕ್ಕೆ ಈ ಮೊದಲು ರೋಂನಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಶ್ರೇಷ್ಠ ಚಿತ್ರವೆಂದು ವಿಮರ್ಶಕರ ಪ್ರಶಸ್ತಿಗೆ ಭಾಜನವಾಗಿದ್ದರೆ, ಕಳೆದ ತಿಂಗಳು ಜರ್ಮನಿಯ ಸ್ಟುಟ್ ಗಾರ್ಟ್ ಚಿತ್ರೋತ್ಸವದಲ್ಲಿ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ಗಳಿಸಿತ್ತು. ಇದೀಗ ಪ್ರಶಸ್ತಿ ಪಡೆಯುವ ಸರದಿ ಚಿತ್ರದ ಮುಖ್ಯ ಪಾತ್ರಧಾರಿ ನಟನದ್ದಾಗಿದೆ. ಖ್ಯಾತ ರಂಗ ನಿರ್ದೇಶಕ ಹಾಗೂ ಚಿತ್ರಕಲಾವಿದ ಬಾಸುಮ ಕೊಡಗು ಅವರ ಮಗನಾದ ದೃಶಾ ಅವರು ಕಟ್ಪಾಡಿಯ ಎಸ್.ವಿ ಎಸ್ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಓದುತ್ತಿದ್ದು, ಅನೇಕ ಕಿರು ಚಿತ್ರಗಳಲ್ಲಿ, ರಂಗ ನಾಟಕಗಳಲ್ಲಿ ಅಭಿನಯಿದ್ದಾರೆ. ಸಂಗೀತ ಮತ್ತು ಸಾಹಿತ್ಯದಲ್ಲೂ ಆಸಕ್ತಿ ಇರುವ ದೃಶಾ ಕಲಾವಿದರ ಕುಟುಂಬದ ಕುಡಿಯಾಗಿದ್ದಾರೆ. ಭಾಗವಹಿಸಿದ ನಾಲ್ಕು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಮೂರರಲ್ಲಿ ಪ್ರಶಸ್ತಿ ಪಡೆದ ಹೆಗ್ಗಳಿಗೆ ಈ ಚಿತ್ರದ್ದಾಗಿದೆ. ಗಿರೀಶ ಕಾಸರವಳ್ಳಿ ನಿರ್ದೇಶನದ ಈ ಚಿತ್ರವನ್ನು ಖ್ಯಾತ ನಿರ್ಮಾಪಕ ಎಸ್.ವಿ ಶಿವ ಕುಮಾರ್ ಅವರು ತಮ್ಮ ಸಂಗಮ ಫಿಲಂಸ್ ಲಾಂಚನದಲ್ಲಿ ತಯಾರಿಸಿದ್ದಾರೆ.

## "ಬರ್ಕ್ಲಿ" ಚಿತ್ರದ ಲಿರಿಕಲ್ ಸಾಂಗ್..

ಸಂತೋಷ್ ಬಾಲರಾಜ್ ನಾಯಕನಾಗಿ ನಟಿಸಿರುವ "ಬರ್ಕ್ಲಿ" ಚಿತ್ರದ ಲಿರಿಕಲ್ ಸಾಂಗ್ ಗೌರಿ–ಗಣೇಶ ಹಬ್ಬದ ಶುಭ ಸಂದರ್ಭದಲ್ಲಿ ಜಂಕಾರ್ ಮ್ಯೂಸಿಕ್ ಬಿಡುಗಡೆ ಮಾಡಿದೆ. ಬಹದ್ದೂರ್ ಚೇತನ್ ಅವರು ಬರೆದಿರುವ ಈ ಹಾಡನ್ನು ಸಂಜಿತ್ ಹೆಗ್ಡೆ ಸುಮಧುರವಾಗಿ ಹಾಡಿದ್ದಾರೆ. ಜ್ಯೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಸಂತೋಷ್ ಎಂಟರ್ ಪ್ರೈಸಸ್ ಲಾಂಛನದಲ್ಲಿ ಆನೇಕಲ್ ಬಾಲರಾಜ್ ಅವರು ನಿರ್ಮಿಸಿರುವ ಬರ್ಕ್ಲಿ ಚಿತ್ರದ ಪ್ರಥಮಪ್ರತಿ ಸದ್ಯದಲ್ಲೇ ಸಿದ್ದವಾಗಲಿದೆ. ಕರಿಯ, ಗಣಪ, ಕರಿಯ2 ಚಿತ್ರಗಳನ್ನು ನಿರ್ಮಿಸಿರುವ ಆನೇಕಲ್ ಬಾಲರಾಜ್ ಅವರ ನಿರ್ಮಾಣದ ಮತ್ತೊಂದು ಅದ್ದೂರಿ ಚಿತ್ರ"ಬರ್ಕ್ಲಿ". ಉತ್ತಮ ಮನೋರಂಜನೆಯ ಈ ಚಿತ್ರಕ್ಕೆ ಸುಮಂತ್ ಕ್ರಾಂತಿ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಗಣಪ, ಕರಿಯ 2 ಚಿತ್ರಗಳಲ್ಲಿ ನಟಿಸಿ ಖ್ಯಾತಿಗಳಿಸಿರುವ ಸಂತೋಷ್ ಬಾಲರಾಜ್ ಈ ಚಿತ್ರದ ನಾಯಕರಾಗಿ ಅಭಿನಯಿಸಿದ್ದಾರೆ. ಬಾಲ್ಯದಲ್ಲಿ ಕೇಂದ್ರ ಸರ್ಕಾರದ ನೋ ಸ್ಮೋಕಿಂಗ್ ಜಾಹೀರಾತಿನ ಮೂಲಕ ಬಾಲನಟಿಯಾಗಿ ಖ್ಯಾತರಾಗಿದ್ದ, ಸಿಮ್ರಾನ್ ನಾಟೇಕರ್ ಈ ಚಿತ್ರದ ನಾಯಕಿ. ಬಹುಭಾಷಾ ನಟ ಚರಣರಾಜ್, ಖ್ಯಾತ ನಟಿ ಶೃತಿ, ಮುಂತಾದವರ ತಾರಾಬಳಗವಿದೆ.



# ಸಿನಿ ತರಂಗಿಣಿ



## ಸಾಗುತ್ತಿದೆ "ಸಾಮರ್ಥ್ಯಾ" ಚಿತ್ರೀಕರಣ



ಕಾರ್ತಿಕ್ ಮೂವೀಸ್ ಲಾಂಛನದಲ್ಲಿ ರಾಜ ರಬಂಡಿ ಕಾರ್ತಿಕ್ ನಿರ್ಮಿಸುತ್ತಿರುವ 'ಸಾಮರ್ಥ್ಯಾ' ಚಿತ್ರಕ್ಕೆ ನಗರದ ಚಿಕ್ಕ ಬಾಣಾವರ, ಕಂಠೀರವ ಸ್ಟುಡಿಯೋ, ಖಾಸಗಿ ಬಂಗಲೆಗಳು, ಹಾಗೂ ಪ್ರಮುಖ ರಸ್ತೆಗಳಲ್ಲಿ, ಚಿತ್ರದ ಪ್ರಮುಖ ಕಲಾವಿದರು ಹಾಗೂ ಸಹಕಲಾವಿದರುಗಳು ಪಾಲ್ಗೊಂಡಿದ್ದ ದೃಶ್ಯಗಳು ಕಾಲೇಜೊಂದರಲ್ಲಿ 4 ದಿನಗಳ ಕಾಲ ಚಿತ್ರೀಕರಣ ನಡೆಯಿತು. ಸತತವಾಗಿ 15 ದಿನಗಳಿಂದ ಚಿತ್ರೀಕರಣ ಸಾಗುತ್ತಿರುವ ಈ ಚಿತ್ರದ ನಿರ್ದೇಶನ ಹೆಚ್. ವಾಸು. ಇದು ಇವರ 24ನೇ ಚಿತ್ರ. ಚಿತ್ರಕ್ಕೆ ಸಂಭಾಷಣೆ ಶಶಿ, ಛಾಯಾಗ್ರಹಣ ಎ.ವಿ. ಕೃಷ್ಣಕುಮಾರ್, ಸಂಗೀತ ಅರುಣ್ ಆಂಡ್ರ್ಯು, ಸಾಹಿತ್ಯ ಕೆ. ಕಲ್ಯಾಣ್, ವಿ ನಾಗೇಂದ್ರ ಪ್ರಸಾದ್, ವಿಶ್ವಾ ಜಿ, ಸಾಹಸ ಅರ್ಜುನ್, ಸಂಕಲನ ವೆಂಕಟೇಶ್ ಯುಡಿವಿ, ಸಹನಿರ್ದೇಶನ ಎನ್ ಬಸವರಾಜು ಚೋರನಹಳ್ಳಿ, ನಿರ್ವಹಣೆ ರಂಗಸ್ವಾಮಿಯವರದ್ದಾಗಿದೆ. ತಾರಾಗಣದಲ್ಲಿ ಬಾಲಾಜಿ ಶರ್ಮ, ಗಗನ ಮಧು, ಶೋಭರಾಜ್, ಅವಿನಾಶ್, ರವೀಂದ್ರನಾಥ್, ಪೆಟ್ರೋಲ್ ಪ್ರಸನ್ನ, ಕಾಮಿಡಿ ಕಿಲಾಡಿಗಳು ಸಂತು, ಸ್ವಾತಿ, ಶಶಿಕುಮಾರ್, ಮುಂತಾದವರಿದ್ದಾರೆ. ಚಿತ್ರಕ್ಕೆ ಬೆಂಗಳೂರು, ಚಿಕ್ಕಮಗಳೂರು, ಸಕಲೇಶಪುರ ಮುಂತಾದೆಡೆಗಳಲ್ಲಿ ಚಿತ್ರೀಕರಣ ನಡೆಯಲಿದೆ. ಲವ್ & ಕ್ರೈಂ ಕಥಾ ವಸ್ತುವುಳ್ಳ ಈ ಚಿತ್ರದಲ್ಲಿ ಸಮಾಜಕ್ಕೆ ಹೊಂದಿಕೊಳ್ಳುವಂತಹ ಹಲವು ತಿರುವುಗಳು ಈ ಲವ್ ಸ್ಟೋರಿಯಲ್ಲಿದೆ.

**ಓಂ ಕಾರ್ ಪುರುಷೋತ್ತಮ್ ನಿರ್ದೇಶನದಲ್ಲಿ ತಯಾರಾಗುತ್ತಿರುವ. "ಪವಾಡ ಪುರುಷ ಅಲ್ಲಿಪುರ ಮಹಾದೇವ ತಾತ " ಚಿತ್ರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಪಾತ್ರದಲ್ಲಿ ಪಿ ವಿ ಎಸ್ ಗುರುಪ್ರಸಾದ್**



## "ಲಂಬೋದರ ವಿವಾಹ"



ಗಣೇಶನ ಹಬ್ಬದ ಮರುದಿನವೇ ನೂತನ ಚಿತ್ರಕ್ಕೆ ಚಾಲನೆ."ಸಂಭ್ರಮ ಸೌರಭ"ದ ಮೂಲಕ ಮನೆ ಮಾತಾಗಿದ್ದ ಸಂಜೀವ್ ಕುಲಕರ್ಣಿ ಪುತ್ರ ಸೌರಭ್ ಕುಲಕರ್ಣಿ ನಿರ್ದೇಶಕನಾಗಿ ಕನ್ನಡ ಚಿತ್ರರಂಗ ಪಾದಾರ್ಪಣೆ ಮಾಡಿದ್ದಾರೆ. ಇವರ ನಿರ್ದೇಶನದ ಮೊದಲ ಚಿತ್ರ "ಎಸ್ ಎಲ್ ವಿ ಸಿರಿ ಲಂಬೋದರ ವಿವಾಹ" ಚಿತ್ರದ ಮುಹೂರ್ತ ಸಮಾರಂಭ ಧರ್ಮಗಿರಿ ಮಂಜುನಾಥನ ದೇವಸ್ಥಾನದಲ್ಲಿ ನೆರವೇರಿತು. ಮೊದಲ ಸನ್ನಿವೇಶಕ್ಕೆ ನಟ ಸಿಹಿಕಹಿ ಚಂದ್ರು ಆರಂಭ ಫಲಕ ತೋರಿದರು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಕ್ಯಾಮೆರಾ ಚಾಲನೆ ಮಾಡಿದರು. ಮಂಡ್ಯ ರಮೇಶ್, ಮಾಸ್ಟರ್ ಆನಂದ್ ಸೇರಿದಂತೆ ಅನೇಕ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಮುಹೂರ್ತದ ದಿನದಂದಿಲ್ಲೇ ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಆರಂಭವಾಗಲಿದೆ. ಕಮರ್ಷಿಯಲ್ ಎಂಟರ್ ಟೈನರ್ ನ ಈ ಚಿತ್ರದ ನಿರ್ದೇಶಕ ಸೌರಭ್ ಕುಲಕರ್ಣಿ ರಂಗಭೂಮಿ, ಕಿರುತೆರೆಯಲ್ಲಿ ಹೆಸರು ಮಾಡಿರುವವರು. "ಪಾಪ ಪಾಂಡು" ಮೂಲಕ ಕನ್ನಡದ ಮನೆಮಾತಾಗಿರುವ ಸೌರಭ್ ಸಾಕಷ್ಟು ಕಿರುಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಸೌರಭ ಕುಲಕರ್ಣಿ ಹಾಗೂ ನಮ್ಮನೆ ಪ್ರೊಡಕ್ಷನ್ಸ್ ತಂಡದವರದು. ಈಗಾಗಲೇ ಅನೇಕ ಚಿತ್ರಗಳಲ್ಲಿ ನಟಿಸಿರುವ ಅಂಜನ್ ಎ ಭಾರದ್ವಾಜ್ ಈ ಚಿತ್ರದ ನಾಯಕ. ಮಂಡ್ಯ ರಮೇಶ್ ಪುತ್ರಿ ದಿಶಾ ರಮೇಶ್ ನಾಯಕಿ. ರಾಜೇಶ್ ನಟರಂಗ, ಸುಂದರ್ ವೀಣಾ, ಬಾಲ ರಾಜವಾಡಿ, ರೋಹಿತ್ ನಾಗೇಶ್, ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ವಸ್ತ್ಯಾಟೊ ವೆಂಚ್ಯೂರ್ಸ್, ಪವಮಾನ ಕ್ರಿಯೇಷನ್ಸ್ ಹಾಗೂ ಧೂಪದ ದೃಶ್ಯ ಈ ಚಿತ್ರವನ್ನು ನಿರ್ಮಿಸುತ್ತಿದೆ. ಸಂಘರ್ಷ ಕುಮಾರ್ ಸಂಗೀತ ನಿರ್ದೇಶನ, ಕಿಟ್ಟಿ ಕೌಶಿಕ್ ಛಾಯಾಗ್ರಹಣ, ವಿನೋದ್ ಸಾಹಸ ನಿರ್ದೇಶನ, ದೇವಿಪ್ರಕಾಶ್ ಕಲಾ ನಿರ್ದೇಶನ ಹಾಗೂ ಕಂಬಿ ರಾಜು ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.




## "ಮೂರು ಮತ್ತೊಂದು" ಹಾರರ್ ಲವ್‌ಸ್ಟೋರಿ

ವಿಪ್ರ ಪ್ರೊಡಕ್ಷನ್ಸ್ ಲಾಂಛನದಲ್ಲಿ ವೀಣಾ ಅವರು ನಿರ್ಮಿಸುತ್ತಿರುವ "ಮೂರು ಮತ್ತೊಂದು" ಎನ್ನುವ ಹಾರರ್ ಹಿನ್ನೆಲೆಯ ಚಿತ್ರಕ್ಕೆ ಪ್ರಶಾಂತ್ ಅಂಕಪುರ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಈ ಚಿತ್ರಕ್ಕೆ ಶೇ.70ರಷ್ಟು ಭಾಗದ ಚಿತ್ರೀಕರಣ ಮುಗಿದಿದ್ದು, ಬಾಕಿ ಇರುವ 4 ಹಾಡುಗಳು ಹಾಗೂ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣವನ್ನು ಚಿಕ್ಕಮಗಳೂರು, ಸಕಲೇಶಪುರ, ಕುಶಾಲನಗರ, ಹಾಸನದ ಸುತ್ತಮುತ್ತ ನಡೆಸಲಾಗುತ್ತದೆ, ಈ ಚಿತ್ರದಲ್ಲಿ ಸಸ್ಪೆನ್ಸ್, ಕಾಮಿಡಿ, ಲವ್ ಸ್ಟೋರಿ ಜೊತೆಗೆ ವಿಭಿನ್ನ ಹಾರರ್ ಕಥಾಹಂದರವನ್ನು ಹೇಳಲಾಗಿದೆ. ಮೂರು ಮತ್ತೊಂದು ಅಂದರೆ ಮೂವರ ನಡುವೆ ಬರುವ ಮತ್ತೊಬ್ಬ ವ್ಯಕ್ತಿ ಯಾರು ಅನ್ನೋದೇ ಚಿತ್ರದ ಸಸ್ಪೆನ್ಸ್. ಈ ಚಿತ್ರದ ನಾಯಕಿ ಮಮತಾ ನೃತ್ಯ ನಾಟಕ, ಸಂಗೀತದ ಬಗ್ಗೆ ಆಸಕ್ತಿ ಹೊಂದಿದ್ದು, ಮೊದಲಬಾರಿಗೆ ನಿರ್ದೇಶಕರು ಅವಕಾಶ ನೀಡಿದ್ದಾರೆ. ಹರಹರ ಮಹಾದೇವ, ಜೈಹನುಮಾನ್, ಮಹಾಕಾಳಿ, ಶನಿ, ಗಟ್ಟಿಮೇಳ, ಧಾರಾವಾಹಿಗಳಲ್ಲಿ ಅಬಿನಯಿಸಿರುವ ರಾಜ್ ಮಣೀಶ್ ಈ ಚಿತ್ರದ ನಾಯಕ, ಉಳಿದ ತಾರಾಗಣದಲ್ಲಿ ಜೂ. ನರಸಿಂಹರಾಜು, ಮಂಡ್ಯ ಆನಂದ್, ಜಗದೀಶ್ ಮುಂತಾದವರು ನಟಿಸಿದ್ದಾರೆ. ಈ. ಚಿತ್ರಕ್ಕೆ ಸುರೇಶ್ ಬಾಬು ಅವರ ಛಾಯಾಗ್ರಹಣ, ಪಳನಿ ಸೇನಾಪತಿ ಅವರ ಸಂಗೀತ, ಕುಶಾಲ್ ಬರಗೂರು ಅವರ ಸಾಹಿತ್ಯ ಹಾಗೂ ಸಂಭಾಷಣೆ, ಹ್ಯಾರಿಸ್ ಜಾನಿ ಸಾಹಸ, ಕಲೈಮಾಸ್ಟರ್ ಅವರ ಕೊರಿಯಾಗ್ರಫಿ ಇದೆ.

**ಅನಿಸಿಕೆಗಳಿಗೆ ಆಹ್ವಾನ**
63624 45871
karavalitharangini@yahoo.com




Edited,Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ Digantha Mudrana Limited, Yeyyadi, Mangaluru 575008 email: karavalitharangini@gmail.com PH: +91 9880109212